Lahari Communique

NEWS LETTER FOR PRIVATE CIRCULATION AMONG THE LEGAL FRATERNITY

Volume 14 December 2002 Part 9

## Revised Timings

With effect from March 1, 2003 the trial courts in the State will be having extended working hours. The courts will be functioning from 10.30 a.m. to 1.30 p.m. and 2.30 p.m. to 5.30 p.m. Consequently the court offices will be working from 10 a.m. to 6 p.m. with a lunch breach of one hour.

## Lawyers' Directory

Lahari Advocates Forum will be publishing a lawyers' directory during April 2003. The directory would be useful for the members of Legal Fraternity. Persons interested in including information about them are required to contact Mr. S. N. Prashanth Chandra, Secretary, Ph. : 3443780 or Mr. A.D. Ramananda, Vice-President, Ph. : 3382922. Please note that the last date for receiving information is March 31.

## Justice Khare is CJI

In a function held at the Ashoka Hall in Rashtrapati Bhavan, on December 19, the President Dr. APJ Abdul Kalam, administered the oath of office to Mr. Justice Visheshwarnath Khare as the 33rd Chief Justice of India. Justice Khare will have 16 months tenure ending on May 2, 2004. He succeeds Mr. Justice G.B. Pattanaik as CJI who retired alter a brief tenure of 41 days.

## Elevated to SC

Mr. Justice Arunachalam Chettiar Lakshmanan, Chief Justice of Andhra Pradesh High Court and Mr. Justice Govind Prasad Mathur, a Senior Judge of the Allahabad High Court were sworn in as the judges of the Supreme Court of India on Friday the December 20.The new Chief Justice Mr. Justice V.N. Khare, administered the oath of office to the new judges. Justice Lakshmanan (60) enrolled as an Advocate in 1968 at Madras. Justice Mathur (61) was enrolled as an Advocate in 1964 at Allahabad.

## Constructive Bar ensures efficient judiciary

Mr. Justice Y. K. Sabharwal, Judge, Supreme Court, addressed the members of Madras High Court Advocates Association (MHAA) on December 27. Citing incidents from his life, the Judge said honest approach, hard labour and humility alone would ensure progress and prosperity of Advocates as well as judicial officers. The judiciary cannot be efficient and independent without the constructive participation of advocates, he said. Advocates should be open to innovations and they should not presume problems to start agitations. Every member of the Bar today will be a potential member of the judiciary tomorrow.

He referred to the court violence in the Delhi High Court witnessed a couple of years ago and disapproved of the rampaging lawyers barging into court rooms, shouting slogans, abusing judges and making court proceedings impossible. Though the advocates responsible for the violence were not punished, thanks to the majority judgment, he himself had favoured exemplary punishment to them. "The pill is not sweet, but it is in the interest of the judiciary", he said.

## Point Blank

**This is not a dumping ground where the judges, unwanted elsewhere, be dumped.**

President of Guahati High Court Advocates' Association while speaking to media persons after Advocates throughout north eastern states boycotted courts on 9.12.2002 protesting against transfer of certain judges to Guahati High Court.

**Read Communique**

## Lawyers strike work

Defying the Supreme Court order banning strikes, lawyers across the country struck work on December 18, to protest the amendments introduced to the Legal Services Authority Act. The Vice-Chairman of the Bar Council of India, Mr. Adish C. Aggrawal told the press on December 19 that except in Jodhpur and Jaipur Lawyers in other parts of the country, barring the apex court abstained from the court work. The apex court has passed an impractical order, he said. In a related development a three judge bench headed by the CJI ordered notice to the Centre on a writ petition filed by the BCI, chellenging the constitutiona. validity of the LSA (Amendment) Act, 2002.

## Labour Forum

☐ Karnataka Labour Representatives Forum had organised a seminar on "The present Economic policy of the Government - an assault on the working class and right to work" on December 8, 2002 at the senate hall, Central College, Bangalore. The seminar was inaugurated by CPI (M) Polit Bureau Member Mr. Sitaram Yechury. Mr. Justice RP Sethi, Retd. Judge the Supreme Court of India, delivered the keynote address. Other speakers included Mr., G. Nagaraj, President, CPI (M), Karnataka, Mr. M.C. Narasimhan, Advocate and Vice President KLRF, Mr. N.M. Sundaram, Mr. Vasanth Rai, Mr. VJK Nair and Mr. H.V. Ananth Subba Rao.

☐ The above Forum had organised a lecture on the topic "Crisis in Judiciary" at Hotel Kanishka, Bangalore on December 9, 2002. Mr. Justice R.P. Sethi, Retd. Judge, Supreme Court of India delivered the lecture. Mr. Justice P.P. Bopanna, Retd. Judge, High Court of Karnataka, presided

## Around the Courts

☐ **Misappropriation of sale proceeds of a client's house, debarring Advocate from practising - justified;**

Expressing serious concern over increasing incidents of professional misconduct of lawyers coming to light the Supreme Court has asked the State Bar Councils to take immediate remedical steps to set right the trend. In a judgment delivered during the first week of December a bench of the apex court comprising Mr. Justice V. N. Khare and Mr. Justice Ashok Bhan, upheld an order passed by the Bar Council of India (BCI) permanently debarring Mr. Vikas Deshpande, an Advocate, from practising for fraudulently misappropriating the sale proceeds of a client's house besides imposing Rs. 25,000/- as costs. Holding that the appellant "has committed a grave professional misconduct" the bench observed that the relationship between an Advocate and client is of trust and therefore sacred. Preservation of mutual trust between the Advocate and client was a must, the Bench observed, as otherwise the judicial system will collapse and fail.

☐ **Rule 58 (2)(B) of the ESI (General) Rules 1950 - default of the employer to pay contribution - would not affect the payment of insurance money to the employee.**

On December 26, in a major ruling benefiting lakhs of employees the Supreme Court has held that non-payment of contribution by the employer to ESI Fund would not affect the payment of insurance money to the employee in case of his death, accident or medical exigencies. Giving benefit to the kin of an employee working with Bhagirathi Engineering in Chennai, a bench comprising Mr. Justice SSM Quadri and Mr. Justice Arizit Pasayath said the date of commencement of the insurance cover for the employee under ESI Scheme was the date from when he was employed by the employer.

In the instant case an

see page 3

## Death no solution

Death penalty for rapists will only reduce the conviction rate further, speakers at a meet on "capital punishment for rapists" said on Tuesday December 4, held in Bangalore. "To destroy evidence completely, the culprit will end up killing the woman he raped. Life imprisonment along with compulsory compensation for the victim is a viable option" they echoed. Stating that only 30% of the cases are reported of which a miniscule 3% are convicted a spokesman for an NGO said "today even conviction full punishment is not given to the rapist. If capital punishment is introduced conviction will never takesplace. violence against woman will increase. There may be chances of rape cases being passed off as murder cases". The speakers argued for the need for changing the investigative procedures while dealing with rape cases and said that women should not be subjected to "re-live" trauma during interogation. The present law embarass the victim so much that she is almost raped once again.

## Kolar Diary

☐ In a special general body meeting of the Kolar District Bar Association held on 12.12.02 a resolution was adopted condoling the sad demise of renowned jurist N. A. Palkhivala.

☐ On 18.12.02 all the Bar Associations in the District observed protest day as per the call given by the All India Bar Council.

☐ The general body meetings of the Kolar District central Advocates Association held at Kolar on 22.12.02 elected Mr. B. M. Srinivas as its President for the year 2003. Mr. C. Srinivas was unanimously elected as the Secretary of the Association. Mr. H. Krishegowda, Mr. G. Srinivas, Mr. G. Jayaramanna, Mr. V. Brahmanandam, Mr. K. R. Venkatarame Gowda, Mr. M. Srinivasa, Mr. M. G. Srinivasa Rao, Mr. B. V. Ramaswamy, Mr. M. S. Badrinarayana, Mr. Khalid Pasha and Ms. F. Chandrakala were unanimously elected as the Members of the Executive committee.

## Kannada Rajyotsava

☐ On 4.12.02 Bangalore Advocates Literary Union, Advocates Association Bangalore and Bangalore Advocates Co-operative society Jointly organised a programme in the promises of Bangalore City Civil Court to celebrate Kannada Rajyotsava. Mr. Justice P. V. Shetty, Judge, Karnataka High Court, Mr. D. B. Chandre Gowda, Minister for Law and Parlimentary Affairs, Government of Karnataka and Kalaratna Sri Alur Nagappa, a renowned folklore Litterateur were the Chief Guests at the function, Mr. T. M. Venkata Reddy, President of BALU, presided. Mr. K. N. Subba Reddy, President AAB and Mr. NSS Gupta, President, BACS graced the function.

☐ On 13.12.02 Kannada Sangha of Judicial Department Employees of Bangalore celebrated 47th Kannada Rajyotsava at the City Civil Court premises in Bangalore. Mr. P. V. Hogade, District and Sessions Judge, Bangalore Rural, Mr. K. N. Keshava Narayana, Principal Judge, Court of small causes Bangalore and renowned literary analyst Prof. L. S. Seshagiri Rao were the Guests of honour. The function was presided over by Mr. A. R. Siddiqui, Principal Judge, Bangalore City Civil and Sessions Court.

## Literary Union

☐ Under the auspices of Bangalore Advocates Literary Union Mr. Justice P. V. Shetty, Judge, High Court of Karnataka, released a book titled "Nagu Nellage" written by Ms. Srilatha V. Murthy, Advocate. The union had organised the function on 11.12.02 at the City auditorium of AAB in this regard. Renowned humourist and writer G.S. Phanibhushan, who was the Chief Guest at the function, introduced the book to the audience. Mr. T. M. Venkata Reddy, President of the union, presided.

☐ On 19.12.02 the Union had jointly organised with the Directorate of Kannada and culture a Sugam Sangeeth programme at the AAB, Magistrates Court unit in Bangalore. Ms. M. S. Srikrupa and friends were the guest artists.

## Probe against another judge

The Chief Justice of India, G.B. Pattanaik, is set up on "in house" committee headed by the Chief Justice of the Punjab and Haryana High Court, Ravi Swaroop Dhavan, to probe allegations of "misconduct" against a sitting judge of the Rajasthan High Court. This is the third such committee to probe allegations against High Court judges.

## Crime Diary : Cost of Contradictions

**From the repertoire of P V Kittoor, Advocate**

*From the last issue*

On the next morning they took Ravi to an electronic shop at Parel, Bombay and secured remaining parts of the VCP, which he had sold there for a sum of Rs. 1,200/-. The police seized the same and then obtained a return transit pass from the Police at Bombay brought Ravi to Bangalore and lodged him in their police station. On the next morning, the police took Ravi to a temple at Charmadi ghat and from a place nearby the temple, recovered a knife said to have been thrown by Ravi while he was on his way to Mangalore on the next day of the incident. The police further took Ravi to a shoe shop in Pane Mangalore near Uppinangadi. One Mr. Joseph, the proprietor, is said to have identified the two pump shoes, as the shoes given by him to Ravi. After meeting Mr. Joseph both Ravi and Harsha left Pane Mangalore in the night bus, which was bound to Bombay.

In the course of the investigation, a number of witnesses were examined and one shirt, which was on the person of Ravi, was seized for the reason that Murthy identified that shirt as his own shirt. The police inferred that Ravi might have changed his shirt to abandon his blood stained shirt. With this material the police placed the charge sheet against Ravi and Harsha, showing Harsha as absconding. The summons and warrants against Harsha did not yield any fruit. So, the case proceeded only against Ravi and the case against Harsha was split up, and transferred to long pending list. Ravi alone was tried by the court of the sessions Judge.

In the course of the trial twenty five witnesses were examined in support of the prosecution to substantiate the case against Ravi and the evidence so adduced consisted of the following categories: -

**Motive :** The prosecution tried to project this aspect on the ground that Ravi was annoyed since his service was discontinued and also for the reason that he was paid his dues towards his salary for a couple of months. It is also stressed by the prosecution that the VCP of the brother of Ravi which was given for repair to Murthy was not returned by attending to the repairs and when demanded repeatedly by Ravi the request was turned down and ultimately Ravi had come with his friend on the previous day of the incident asking for VCP, when Murthy was not in the house, and the deceased lady also refused to give that VCP which was kept in the house itself. This part of the evidence was spoken to by Murthy alone. It had no corroboration.

**Circumstantial Evidence: -**

The fact that Ravi with his friend had come to the residence of Murthy, talked to the deceased on the previous day and this was conveyed by the deceased to the informant husband Murthy. This also was not corroborated by any other witness.

It was alleged that Ravi and Harsha left for Pane Mangalore a day after the date of the incident. They went by bus via Charmadi Ghat and stayed with their friend Joseph a shoe keeper at Pane Mangalore and Ravi got a pair of shoes from Joseph. Joseph in his statement stated that Ravi and Harsha had a kitbag and they showed a VCP, with an intention to sell away the same. As this Joseph, according to him had no sufficient funds and he could not arrange for any purchaser, Ravi and Harsha left Pane Mangalore saying that they are going to Bombay. In the course of the trial Joseph identified the pair of pump shoes and also the parts of the VCP.

**Circumstantial Evidence from witnesses who are residents of Bombay :**

It was adduced in the form of evidence that Ravi consequent on his arrest at Damnad, on being brought to Bombay, identified the shop keeper, who admitted that Ravi and his friend had brought some parts of the VCP for sale and that he settled the deal for a certain sum of maoney paid in part and requested Ravi and his friend to collect the balance in a couple of days. In the course of examination he emphatically maintained that the person that had come with Ravi had settled the deal and handed over the VCP to him and Ravi was stranger to him, whom he had never seen before.

*to be continued*

# Around the Courts

From Page 1

employee, Balakrishnan, had died in service and his certificate for registration under the ESI Scheme was issued after his death. The ESI corporation had refused to pay insurance money on the ground that the certificate was given only after the death of the employee.

Rejecting ESIC's stand, Justice Pasayat, writing for the bench, said "the payment or non-payment of contribution and action or non-action prior to or subsequent to the date of accident is really inconsequential" as for as payment of insurance cover to the employee was concerned.

After setting the dispute regarding payments from ESI fund, the bench observed that it was the obligation of the employer to pay the contribution from the date the ESI Act applied to the factory or the establishment. It was not open to the employer to with hold paying contributions to the ESI Fund on the ground that the employees were not traceable or that there was dispute about their where abouts.

**☐ Imposition of 100 percent increase in third party insurance tariff validity**

On December 28, the Kerala High Court directed the insurance companies to scrupulously observe the parameters set by the Insurance Regulatory and Development Authority and the Tariff Advisory Committee (General Insurance) for loading 100% on third party insurances tariff.

Mr. Justice M. Ramachand- ran issued the directive while disposing of a batch of 90 odd writ petitions challenging the imposition of 100 percent increase on third party insurance premium, The court also directed the insurance companies, to refund the excess amount already collected. Counsel for the insurance companies pleaded that no directive be issued to refund the amount collected over and the above 100 per cent loading as the clarification on the issue had now been given. The court said the latest clarification had explained only what was there earlier, and nothing new. The companies had to "disgorge what has been gulped in excess right now" or if their clients were agreeable, gave credit to the excess payment already remitted by way of loading at the time of fresh renewals and at the option of the vehicle owners. The parameters were set by the commission in its latest circular issued on October 29, 2002, to all the insurance companies.

The circular made it clear that since the loading on the tariff premium for adverse claims experience for the first renewal was stipulated not to exceed 100 per cent, there could not be any loading beyond 100 per cent for the renewals falling during the one year period commencing July 1, 2002. In cases where no claims had been lodged in the previous year or where the owners enjoyed no claim bonus, no loading should be made. There shall be no uniform loading of 100% in all cases. The loading upto 100% should be made in individual cases, depending on the claims profile. In otherwords, loading could be applied for adverse claims experience of the vehicle insured.

**☐ Challenging preventive detention failure to file counter affidavits by the prosecution - vitiates continued imprisonment.**

On December 30, the Supreme Court has held that if the union or the State Governments failed in their obligation to file counter-affidavits when preventive detentions were challenged, courts would have no alternative but to quash such detention orders by default.

A Bench, comprising Mr. Justice S. Rajendra Babu and Mr. Justice P. Venkatarama Reddi, gave this ruling while quashing an order passed by the Chennai Police Commissioner in April detaining S. Jai Kannan of Mogappair under the Tamil Nadu Goondas Act. The Bench setaside the judgment of the Madras High Court upholding the detention and directed the release of the detanu forthwith.

The Bench cited an earlier judgment of the apex court wherein it was observed that of late the centre had not shown a sense of responsibility while dealing with preventive detention cases, namely, of filing a counter in time before the court dealing with habeas corpus petitions.

Referring to the High Court's observation that it had perused the file of the accused, the Bench reiterated the position that the indulgence shown by the courts in perusing the file seemed to have given an impression that the Central Government was under no obligation to file a counter - affidavit to explain the delay in considering the detenu's application.

The Bench quoted on earlier judgment which said that if the Central or State Governments failed to file the counter, then the detention order had to be quashed by default.

# Tribute to Palkhivala

**Prof. B. M. Baliga**

The day I joined the Law College at Bangalore in July, 1971, I happened to see an advertisement that late Mr. Nani A. Palkhivala was going to deliver the Rajaji Memorial Lecture at the Gokhale Institute of Public Affairs in Bangalore, and on that day, on hearing Mr. Palkhivala's lecture, I truly felt that Mr. Palkhivala gave me the greatest inspiration on the eve of entering the field of law, Mr. Palkhivala Published his certain lectures but he did not write his autobiography as such, and therefore, this article is on the basis of certain anecdotes in his life that I had read from time to time over the years. Mr. Palkhivala did not want to join the Law College and he had applied for the post of a lecturer in English but the College management selected a lady lecturer instead of Palkhivala. But the most humorous part of this anecdote was that Mr. Palkhivala used to invite that lady lecturer for dinner every year for thanking her that she was responsible for his joining the field of law and for prospering as a lawyer ! Secondly, I recall with great respect to the memory of late Justice Chagla, the former Chief Justice of the Bombay High Court and a former Union Minister, that when he was the Chairman of the Selection Committee for the selection of law lecturers in the Government Law College at Bombay in 1943 or so, he selected two young chaps overlooking the claims of other senior members of the Bar, and they were none but one Mr. Y. V. Chandrachud, who became the Chief Justice of India, and another Mr. Palkhivala himself, who became the greatest and the most brilliant advocate of our times during the last fifty years, nay the 20th century itself if I may state with respect to earlier pre-independence stalwarts like late Munshi, Sir Alladi and others.

It can be said without any fear of contradiction that the most important contribution of Mr. Palkhivala was in the field of the Constitutional law, especially his discovery of the basic structure or basic feature theory in our Constitution and arguing most ably before the Supreme Court in the landmark judgment of the last century in the Kesavananda Bharati vs. State of Kerala (1973) From the law reports, I would like to mention here that he laboured so much that he produced before the Supreme Court truck loads of dictionaries and other legal materials on various provisions of about the 71 constitutions of various countries in the World to bring home the meanings and interpretations of certain provisions of our Constitution when he challenged the constitutional validity of the 24th and 25th Amendments to the Constitution in 1971. It was his greatest achievement that the majority judges of the Supreme Court accepted the basic feature doctrine as propounded by Mr. Palkhivala and that made our democracy safe in the country and saved the constitutional and fundamental rights of the people. He used to propagate that he stood for the "We, the people of India......" and it is truly we who have been benefited for ever by his contribution in the filed of the constitutional law in our country and but for his such unique contribution at that crucial time in the history of India, the then Government would have taken the country irreversibly on the path of a totalitarian form of government trampling upon the liberty and fundamental rights of the people of India. On the completion of about four months of arguments before the Supreme Court, late H. M. Seervai, the famous author of the Constitutional Law and former Advocate General of Maharashtra State, who opposed Mr. Palkhivala in the Kesavananda Bharati's case, virtually broke down and confessed before the Supreme Court that he was completely tired out in arguing in that case and submitted that perhaps it was his last case before the Supreme Court ! Such was the unique industry and labour put in by Mr. Palkhivala in that famous case in 1973.

It was Mr. Palkhivala who went all over the country covering its length and breadth to propagate his views against the then Government of India both against its legal and economic policies with his famous refrain that there could be economic growth without social justice but there could be no social justice without economic growth ! In the post-Nehru era, among the great personalities like Rajaji, Acharya Kripalani, JP and Mino Masani, Mr. Palkhivala too was one such person to plead for probity in public life and corruption free administration in India.

## Judges appointed

The President has appointed seven regular judges and six additional judges to Allahabad High Court during the third week of December 2002. The regular judges are : Mr. Justice Prakash Krishna, Mr. Justice Rajesh kumar, Mr. Justice Sibghat Ullahkhan, Mr. Justice Amarnath Varma, Mr. Justice Devendra Pratap Singh, Mr. Justice Vimlesh Kumar Shukla. The additional judges are Mr. Justice Ghanshyam Dass, Mr. Justice Devendra Prasad Gupta, Mr. Justice Radhey Shyam Tripathi, Mr. Justice Mukteshwar Prasad, Mr. Justice Umeshwar Pandey and Mr. Justice Kailash Nath Ojha.

## Appointments

☐ Mr. P. S. Dinesh Kumar, Advocate has been appointed as the Senior Standing Counsel for Central Government cases in the High Court of Karnataka. Mr. Dinesh Kumar replaces Mr. Ashok Harnahalli, who completed his term.

☐ By a notification dtd. 28.12.2002 Mr. G. Chandra-shekharaiah, Advocate, has been appointed as the IV Addl. Government pleader for State Government cases in trial courts. The appointment is for a period of three years.

☐ By an office order of the Dept. of Legal Affairs dtd. 22.11.2002, The president of India has extended the term of engagement of the undermentioned Additional Central Government Standing Counsels in Bangalore City Civil Courts for a further period of three years from the dates mentioned against their names, Mr. Vishalaxa Kadiwal (19.7.2002), Mr. K. Rama Bhat (19.7.02), Mr. G. V. Hegde (19.7.02), Mr. H. T. Vasanth Kumar (19.7.02), Mr. S. C. Mahadevamurthy (19.7.02) Mr. Prem Kumar (02.8.02) and Mr. Noor Pasha (02.8.02).

## State Bar Council

It has been reported that the karnataka State Bar Council has sold Advocates Welfare Fund stamps numbering 7,55,598 worth Rs. 34, 34, 101 during 1997, 9,25,205 wirth Rs. 42,03,488 during 1998 and 9,68,180 worth Rs. 44,13,895 during 1999.

## Judging the Judges

On December 7 Mr. Justice MF Saldanha, Judge High Court of Karnataka, addressed the members of the Bar Association of Mangalore. He said that the time had come to "judge the judges" and it is the appropriate time to constitute a "national judicial commission" with legal luminaries as members. It is time for introspection, as the judicial system was on trial and considering the serious erosion of values of the judiciary, which were contained in unwritten conventions of morals. Immoral conduct could not be scandalous when it was reported, and it could not be helped if the conduct itself was scandalous. The "employees" of the system, could not claim to be "sacrosanct", and when there was breach of public confidence in a system, it had to be addressed with the proper inbuilt machinery for dealing with such exigencies. That was there the need of the establishment of an independent body that governed the standards and maintained decorum the judiciary was felt, Mr. Justice Saldanha said.

## Media Criticism welcome

Barring charactor assasin-ation, media's criticism of issues and individuals should be welcomed, the former Supreme Court Judge S. Mohan, said. He was speaking at a conference on "role of media in national development" in Chennai on December 11. Asking politicians and the judges not to be worried over criticism of their actions when the press does good, it was important not to stop it. "I am in favour of every criticism except character assasination", he said.

## Panel Discussion

Federation of Karnataka Chambers of Commerce and Industry (FKCCI) organised a panel discussion on the Securitisation and Reconstruction of Financial Assets and Enforcement of Security Interest Act, 2002. The Act provides for a proper framework for securitisation and the much - needed recovery mechanism. The discussion held on December 18 welcomed the Act as "necessary and timely". Prabha S. Prasad, General Manager RBI, N. Ramesh, Asst. General Manager SBI and Kalpesh Kikani, Asst. General Manager ICICI were participated.

## Campus Watch

In a recent complaint to Uparpet Police, Mr. K. H. Hanumantharaya, Principal of the University Law College, Bangalore has stated that a Junior Assitant, I Srinivasaiah, attached to the college has misappropriated Rs. 1.23 Lakhs belonging to the college. The complaint was lodged following a Departmental inquiry held against the official who had reportedly went on leave from October. The official who joined the college in July 1996 is said to have misappropriated the money between 1999 and 2002.

## Miscellany

☐ Ms. P. Anu Chengappa, Advocate, secured the first prize in the all women speech contest held in Bangalore on December 8, 2002 under the aegies of the Toast Masters LA 1924. She received a trophy, certificate of merit and gift vouchers from the organisers/sponsors. the subject of the speech was "India of my dreams". Lahari Advocates Forum congratulate her on this success.

☐ Between January 1988 and December 2002 a record of sorts has been created by Mr. K. M. Basavaraju, Advocate and Notary from Bangalore, by visiting Lord Venkateswara Temple, Thirupati, 180 times.

## Weddings

We are glad to report that :

☐ On 1.12.2002 Mr. S. Yathiraj, an Advocate from Bangalore married Ms. Pushpalatha at Ajjampura, Chickamagalur District.

☐ On 02.12.2002 Mr. M. Nagesh, an Advocate from Magadi married Ms. M. V. Nagalakshmi at Mysore.


☐ On 8.12.2002 Mr. R. R. Devendragowda, an Advocate from Bangalore married Ms. C. Indira at Kolar.

☐ On 08.12.2002 Mr. Sanjay, Advocate, married Ms. Preet at Bangalore. Mr. Sanjay is the son of Mr. Lachman M. Bhatia, Advocate.

☐ On 18.12.2002 Mr. P. Subramanya Bhat an Advocate from Bangalore married Ms. Sahana at Andinje Village in Belthangady Taluk (DK)

☐ On 29.12.2002 Mr. B. Subraya Kharvi, an Advocate from Bangalore, married Ms. Mamatha at Sagara, Shimoga Dist. Mr. Subraya is the Colleague of Mr. C. S. Ramadas, Advocate, Bangalore.

## Congratulations



Mr. Abhyuday A Anand, a student of University Law College Bangalore, has secured M.K. Memorial Trust Gold Medal in Constitutional Law and Baba Saheb B. R. Ambedkar Gold Medal for having secured the highest marks amongst the SC/ ST students of Bangalore University in the LLB examination held during April 2002. He is presently studying LLM course in University Law College, Bangalore. Abhyuday is the son of Mr. K. Abhinav Anand, Advocate, from Bangalore. Lahari Advocates Forum congratulates the Gold Medalist.

## Kudos Vasudeva



The Karnataka Government has appointed Mr. Y. Vasudeva, Advocate, and former president of Bangalore Advocates Co-operative Society as the new Chairman of Karnataka Film Development Corporation. Lahari Advocates Forum wishes him a great success and hopes that the film industry in the state would get a boost during his term.

## Humour in courts

Two young lawyers were chatting about a third lawyer.

***I Lawer :*** He is a leading lawyer.

***II Lawyer :*** How do you say that ?

***I Lawyer :*** It is reported that through out his professional career he is in the habit of putting leading questions in the examination - in - chief !

## Foreign Tour

Mr. M. Sudhakar, Advocate, left Bangalore on 18.12.2002 for a tour of Singapore, Malaysia, Thailand and Srilanka lasting 12 days. He also attended the World Telugu conference held at Singapore.

Published by : Lahari Advocates Forum, No. 2980, "Laxmideep", 17th Cross, K. R. Road, BSK II Stage, Bangalore-560 070 and
Printed at : Parimala Mudranalaya, Mount Joy Extension, Hanumanthanagar, Bangalore-560 019. Phone : 6525516. Editor : K. Suryanarayana Rao

# ಲಹರಿ ಸಂವಾದ

ಸಂಪುಟ ೩ | ಶಕೆ : ಚಿತ್ರಭಾನು ಸಂವತ್ಸರ, ಮಾಸ : ಕಾರ್ತಿಕ – ಮಾಘ | ಸಂಚಿಕೆ ೯


## ಎಲ್ಲರ ಲಕ್ಷ್ಯ ಸೆಳೆದ 'ಸಾರ್ಥಕ ಸಂಜೆ' ವಿಶಿಷ್ಟ ಕಾರ್ಯಕ್ರಮ

ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖಾ ನೌಕರರ ಸಂಘವು ರಚನಾತ್ಮಕ ಚಟುವಟಿಕೆಗಳನ್ನು ನಡೆಸುವಲ್ಲಿ ಇಡೀ ರಾಜ್ಯಕ್ಕೆ ಮಾದರಿ ಸಂಸ್ಥೆಯಾಗಿ ಬೆಳೆಯುತ್ತಿದ್ದು, ಇವೆಲ್ಲಕ್ಕೂ ಕಳಸವಿಟ್ಟಂತೆ ಡಿ. ೧೧ರಂದು ಏರ್ಪಡಿಸಿದ್ದ 'ಸಾರ್ಥಕ ಸಂಜೆ' ಐತಿಹಾಸಿಕ ಘಟನೆಯಾಗಿ ದಾಖಲಾದರೆ ಆಶ್ಚರ್ಯವಿಲ್ಲ.

ನಗರ ಸಿವಿಲ್ ಕೋರ್ಟ್‌ಗಳ ಸಮುಚ್ಛಯ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಎನ್. ಕೆ. ಜೈನ್ ಅವರು ನೌಕರರ ಸಂಘದ ಪರವಾಗಿ ಹತ್ತು ಲಕ್ಷ ರೂ.ಗಳ ಹುಂಡಿಯನ್ನು ಕಿದ್ವಾಯಿ ನ್ಯಾಯಾಂಗ ಸ್ಮಾರಕ ಗ್ರಂಥಿಸಂಸ್ಥೆಯ ನಿರ್ದೇಶಕರಾದ ಡಾ|| ಪಿ. ಎನ್. ಪ್ರಭಾಕರನ್ ಅವರಿಗೆ ನೀಡಿ ನ್ಯಾಯಾಂಗ ಇಲಾಖೆಯ ನೌಕರರನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ಕ್ಯಾನ್ಸರ್ ರೋಗದ ನಿವಾರಣೆಗೆ ಕೊಡುಗೆಯನ್ನು ನೀಡಿದಂತೆಯೇ ಕೋರ್ಟುಗಳಲ್ಲಿ ಏರುತ್ತಿರುವ 'ಭಾರಿ' ಪ್ರಕರಣಗಳ ವಿಲೇವಾರಿಗೂ ಸಂಪೂರ್ಣ ಸಹಕಾರ ನೀಡ ಬೇಕೆಂದು ಕರೆ ನೀಡಿದರಲ್ಲದೆ ನ್ಯಾಯಾಂಗ ನೌಕರರ ಕೇಂದ್ರ ಸಂಘಟನೆಗೆ ಸೂಕ್ತ ನಿವೇಶನ ನೀಡುವ ಬಗ್ಗೆ ಪರಿಶೀಲಿಸುವುದಾಗಿ ಭರವಸೆ ನೀಡಿದರು.

ಕೊಡುಗೆಯನ್ನು ಸ್ವೀಕರಿಸಿ ಮಾತನಾಡಿದ ಡಾ|| ಪ್ರಭಾಕರನ್ ಅವರು ತಮ್ಮ ಅಧಿಕಾರಾವಧಿಯಲ್ಲಿ ಪಡೆದ ಅತ್ಯಂತ ದೊಡ್ಡ ಕೊಡುಗೆ ಇದಾಗಿದ್ದು ಇಷ್ಟು ದೊಡ್ಡ ಮೊತ್ತವನ್ನು ಸದ್ದುಗದ್ದಲವಿಲ್ಲದ ಸರಳ ಸಮಾರಂಭ ನಡೆಸಿ ಕೊಡಮಾಡಿದ್ದು ''ಬಲಗೈ ಯಿಂದ ನೀಡಿದ್ದನ್ನು ಎಡಗೈಗೆ ಗೊತ್ತಾಗಬಾರದು'' ಎಂಬ ನಮ್ಮ ಸಂಪ್ರದಾಯಕ್ಕೆ ಅನುಗುಣವಾದದ್ದು ಎಂದರು. ತಮ್ಮ ವೈದ್ಯಕೀಯ ಅನುಭವವನ್ನು ಪ್ರೇಕ್ಷಕರಲ್ಲಿ ಹಂಚಿಕೊಂಡ ಶ್ರೀಯುತರು ಕಿದ್ವಾಯಿ ಸಂಸ್ಥೆಯಲ್ಲಿ ಶುಶ್ರೂಷೆಗಾಗಿ ಬರುತ್ತಿರುವ ೪೫ ಸಾವಿರ ರೋಗಿಗಳ ಪೈಕಿ ೧೫ ಸಾವಿರ ರೋಗಿಗಳಿಗೆ ಧೂಮಪಾನ, ಹೊಗೆಸೊಪ್ಪು ಸೇವನೆ, ಕುಡಿತದಂತಾ ದುಶ್ಚಟಗಳಿಂದ ಕ್ಯಾನ್ಸರ್ ತಗಲಿದ್ದು ಸಾರ್ವಜನಿಕರು ಅಂತಹ ದುರಭ್ಯಾಸದಿಂದ ದೂರವಿದ್ದರೆ ಅಷ್ಟರ ಮಟ್ಟಿಗೆ ರೋಗಿಗಳ ಸಂಖ್ಯೆ ಇಳಿಮುಖವಾಗಿ

೧ನೇ ಪುಟ ನೋಡಿ

## ರಾಜ್ಯೋತ್ಸವ - ೨೦೦೨

ದಿನಾಂಕ : ೧-೧೨-೨೦೦೨ರಂದು ಸಂಜೆ ೪.೩೦ ಗಂಟೆಗೆ ನಗರ ಸಿವಿಲ್ ನ್ಯಾಯಾಲಯದ ಆವರಣದಲ್ಲಿ ಬೆಂಗಳೂರು ವಕೀಲರ ಸಾಹಿತ್ಯ ಕೂಟ, ಬೆಂಗಳೂರು ವಕೀಲರ ಸಂಘ, ಮತ್ತು ಬೆಂಗಳೂರು ವಕೀಲರ ಸಹಕಾರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ೪೭ನೇ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಸಾಹಿತ್ಯ ಕೂಟದ ಅಧ್ಯಕ್ಷರಾದ ಶ್ರೀ ಟಿ. ಎಂ. ವೆಂಕಟರೆಡ್ಡಿ ಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ವೇದಿಕೆಯಲ್ಲಿ ಅತಿಥಿಗಳಾಗಿ

೧. ಹೈ|| ನ್ಯಾ|| ಶ್ರೀ ವಿಶ್ವನಾಥ ಶೆಟ್ಟಿರವರು
೨. ಶ್ರೀ ಡಿ. ಬಿ. ಚಂದ್ರೇಗೌಡರವರು, ಕರ್ನಾಟಕ ರಾಜ್ಯ ಕಾನೂನು ಸಚಿವರು
೩. ಶ್ರೀ ಕಲಾರತ್ನ ಆಲೂರು ನಾಗಪ್ಪನವರು, ಸಾಹಿತಿಗಳು ಹಾಗೂ ಜನಪ್ರಿಯ ಜಾನಪದ ಕಲಾವಿದರು
೪. ಶ್ರೀ ಚೇತನ್‌ರವರು, ಚಲನಚಿತ್ರ ನಟರು
೫. ಶ್ರೀ ಕೆ. ಎನ್. ಸುಬ್ಬಾರೆಡ್ಡಿರವರು, ಬೆಂ. ವಕೀಲರ ಸಂಘದ ಅಧ್ಯಕ್ಷರು ಹಾಗೂ ಶಾಸಕರು
೬. ಶ್ರೀ ಎನ್. ಎಸ್. ಎಸ್ ಗುಪ್ತರವರು, ವಕೀಲರ ಸಹಕಾರ ಸಂಘದ ಅಧ್ಯಕ್ಷರು
೭. ಶ್ರೀ ಹೆಚ್. ಎಂ. ಮರಿಯಪ್ಪನವರು, ಬೆಂ. ವ. ಸಂ.

ಆಹ್ವಾನಿತರಾಗಿ ಆಸೀನರಾಗಿದ್ದರು. ಇವರೊಂದಿಗೆ ಸಾಹಿತ್ಯಕೂಟದ ಇತರ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಾಹಿತ್ಯ ಕೂಟದ ಕಾರ್ಯದರ್ಶಿಗಳಾದ ಶ್ರೀ ಎನ್. ಸಿ. ನಾರಾಯಣ್‌ರವರ ನಿರೂಪಣೆಯೊಂದಿಗೆ ಹಾಗೂ ಶ್ರೀ ಶ್ರೀನಿವಾಸಮೂರ್ತಿರವರ ಗಣಪತಿ ಪ್ರಾರ್ಥನೆಯೊಂದಿಗೆ ಆರಂಭ ಗೊಂಡ ಸಭೆಗೆ ಅತಿಥಿಗಳನ್ನು ಆಹ್ವಾನಿಸಿ ಸ್ವಾಗತ ಕೋರುವ ಹೊಣೆಯನ್ನು ಬೆಂಗಳೂರು ವಕೀಲರ ಸಂಘದ ಕಾರ್ಯದರ್ಶಿಗಳಾದ ಶ್ರೀ ಮರಿಯಪ್ಪನವರು ಅಚ್ಚುಕಟ್ಟಾಗಿ ನಿರ್ವಹಿಸಿದರು.

ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ವಿಶ್ವನಾಥ ಶೆಟ್ಟಿರವರ ಅಮೃತ ಹಸ್ತದಿಂದ ಕನ್ನಡ ಜ್ಯೋತಿ ಬೆಳಗಿಸುವುದರೊಂದಿಗೆ ಮಹಿಳಾ ವಕೀಲರಾದ ಶ್ರೀಮತಿ ಬಿ. ಪಿ. ರಾಧ ಮತ್ತು ತಂಡದವರಿಂದ ''ಅಸತೋಮ ಸದ್ಗಮಯ'' ಹಾಗೂ ''ಹಚ್ಚೇವು ಕನ್ನಡದ ದೀಪ'' ಸುಶ್ರಾವ್ಯವಾಗಿ ಹಾಡಿಸಿದ್ದು ಅತ್ಯಂತ ಸಂದರ್ಭಯೋಚಿತವಾಗಿತ್ತು.

ಈ ಶುಭವೇಳೆ ವೇದಿಕೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅತಿಥಿಗಳಿಗೂ ಗಣ್ಯರಿಂದ ಹಾಗೂ ಮೂರೂ ಸಂಘಗಳ ಪದಾಧಿಕಾರಿಗಳಿಂದ ಮಾಲಾರ್ಪಣೆ ಮತ್ತು ಫಲ–ಪುಷ್ಪ ಪ್ರಧಾನ ಮಾಡಲಾಯಿತು.

ನ್ಯಾಯಮೂರ್ತಿಗಳು ಮಾತನಾಡುತ್ತಾ ಭಾಷೆ ಒಂದು ಸಂಪರ್ಕ ಮಾಧ್ಯಮ. ಆಯಾ ಪ್ರಾಂತದ ಭಾಷೆಯನ್ನು ಅಲ್ಲಿ ನೆಲೆಸಿರುವ ಎಲ್ಲರೂ ಕಲಿಯಬೇಕು ಅವರೊಂದಿಗೆ ಹೊಂದಿಕೊಂಡು ಬಾಳಬೇಕು ಅಂದಮಾತ್ರಕ್ಕೆ ಅನ್ಯಭಾಷೀಯರ ಮೇಲೆ ಒತ್ತಡ ಸಲ್ಲದು, ನಾವು ಗಣರಾಜ್ಯದ ಕೇಂದ್ರೀಕೃತ ವ್ಯವಸ್ಥೆಯಲ್ಲಿ ಜೀವಿಸುತ್ತಿದ್ದೇವೆ. ಈ ವ್ಯವಸ್ಥೆಯ ಭದ್ರತೆ ಮೊದಲು, ನಂತರದ ಸ್ಥಾನ ರಾಜ್ಯಕ್ಕೆ, ಭಾರತದ ಅಖಂಡತೆಯ ಆಧಾರಸ್ತಂಭಗಳನ್ನು ಭದ್ರ ಪಡಿಸಬೇಕಿದೆ. ನ್ಯಾಯಾಂಗ ವ್ಯವಸ್ಥೆಯ ಮಹತ್ವವನ್ನು ಎತ್ತಿ ಹಿಡಿಯಬೇಕಾಗಿದೆ. ಭಾಷೆಯ ಅಭಿಮಾನವಿರಬೇಕು, ಅದರ ಉನ್ನತಿಗೆ ದುಡಿಯಬೇಕು ಹಾಗೂ ಅದು ಅತಿರೇಕಕ್ಕೆ ಹೋಗಬಾರದು. ಸಾಹಿತ್ಯ ರಚನೆಯಲ್ಲೂ ಅಷ್ಟೇ ಸ್ವಾರಸ್ಯ ಆಕರ್ಷಣೆ ಇರಬೇಕು. ಸಮಾಜದ ಒಳಿತಿಗೆ ಬೇಕಾದ ವಸ್ತು ಇರಬೇಕು. ಅನ್ಯರಿಗೆ ಮಾರಕವಾಗುವ ಅಥವಾ ವೈಮನಸ್ಯ , ಸಮಸ್ಯೆ ಹುಟ್ಟು ಹಾಕುವ ಕೇಂದ್ರಗಳಾಗಬಾರದೆಂದು ಎಚ್ಚರಿಸಿದರು.

ಸಚಿವರಾದ ಶ್ರೀ ಚಂದ್ರೇಗೌಡರವರು ಮಾತನಾಡುತ್ತಾ ಇಂದು ಎಲ್ಲವೂ, ಎಲ್ಲರೂ ನ್ಯಾಯಾಲಯಗಳತ್ತ ನೋಡುತ್ತಿದ್ದೇವೆ. ನಾಡು, ನುಡಿ, ಗಡಿ, ಜಲ, ಮಾನವ ಜೀವನ ಎಲ್ಲವೂ ನ್ಯಾಯಾಲಯದಿಂದಲೇ ಇತ್ಯರ್ಥವಾಗಬೇಕೆಂಬ ಅನಿವಾರ್ಯತೆ ನಮ್ಮನ್ನು ಆವರಿಸಿಕೊಂಡಿದೆ. ಪರಿಣಾಮ ನ್ಯಾಯಾಲಯಗಳ ಮೇಲೆ ಕೆಲಸದ ಒತ್ತಡ ಹಾಗೂ ನ್ಯಾಯವಿತರಣಾ ವಿಳಂಭ, ಕುವೆಂಪುರವರ ಅಖಂಡ ಭಾರತದ ಕಲ್ಪನೆಯ ಕನಸಿನ ರಚಿತ ಕವನವನ್ನು ಉಚ್ಚರಿಸುತ್ತಾ ನಾವು ಪ್ರಜಾಪ್ರಭುತ್ವದ ಅಖಂಡ ಭಾರತದ ಒಂದು ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ. ಅವುಗಳ ಆಧಾರ ಸ್ತಂಭಗಳ, ಅಖಂಡತೆಯ ಉಳಿವು ಮೊದಲು. ಅವು ಅಸ್ಥಿರತೆಗೊಳಗಾದರೆ ಕಷ್ಟ. ಆದ್ದರಿಂದ ಮೊದಲು ಭಾರತದ ದೃಷ್ಟಿಕೋನ, ಅದರೊಳಗೆ ಕರ್ನಾಟಕದ ಚಿಂತನೆಯನ್ನು ಮಾಡಬೇಕೆಂದರು. ಹಲವಾರು ಮಹನೀಯರು ಪರಿಶ್ರಮದಿಂದ ಅಖಂಡ ಕರ್ನಾಟಕ ವನ್ನು ಕ್ರೂಢೀಕರಿಸಿಕೊಟ್ಟಿದ್ದಾರೆ. ಕೆಲವರು ತಮ್ಮ ಪ್ರಾಂತ್ಯಕ್ಕೆ ಸೌಲಭ್ಯಗಳ ಲೋಪವಾಗಿದೆಯೆಂದು ಅದನ್ನು ವಿಭಜಿಸಲು ಹೊರಟಿದ್ದಾರೆ. ಹೀಗಾದರೆ ಅಖಂಡತೆಯ ಭವಿಷ್ಯ ಹೇಗೆ ಎಂದು ಪ್ರಶ್ನಿಸಿದರು. ಉಚ್ಛ ನ್ಯಾಯಾಲಯ ಮತ್ತು ಸರ್ವೋಚ್ಛ ನ್ಯಾಯಾಲಯಗಳಲ್ಲಿ ಕನ್ನಡ ಭಾಷೆ ಪೂರ್ಣಬಳಕೆಗೆ ತರಲು ಕಷ್ಟವಾದರೂ ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ ಕನ್ನಡ ಭಾಷೆ ಬಳಸಲು ಅಡ್ಡಿಯೇನಿಲ್ಲ. ಆದರೆ ಬಳಸುವ ಮನಸ್ಸು ಮಾಡಬೇಕು. ಸ್ವಲ್ಪ ಪರಿಶ್ರಮ ಪಟ್ಟರೆ ಕನ್ನಡದಲ್ಲೇ ನ್ಯಾಯಾಲಯದಲ್ಲಿ ಬಳಸಲು ಅವಶ್ಯಕವಾದ ಕನ್ನಡ ಪದಗಳು ಖಂಡಿತ ಲಭ್ಯ. ಮಾಡುವ ಮನಸ್ಸು ಮತ್ತು ಸಾಧನೆ ಮುಖ್ಯವೆಂದರು.

ಹೆಸರಾಂತ ಜಾನಪದ ಕಲಾವಿದರಾದ ಆಲೂರು ನಾಗಪ್ಪನವರು ತಮ್ಮ ಅಮೋಘ ಕಂಠಸಿರಿಯಿಂದ ಜಾನಪದ ಸಾಹಿತ್ಯ ಶೈಲಿಯಲ್ಲಿ ಹಾಡಿನ ರೂಪದಲ್ಲೇ ತಮ್ಮ ಭಾಷಣ ಪ್ರಾರಂಭಿಸಿದ್ದು ಸಭಿಕರ ಮೆಚ್ಚುಗೆ ಗಳಿಸಿ ಅವರ ವಾಕ್ ಚಾತುರ್ಯಕ್ಕೆ ಸಭಿಕರು ತಲೆದೂಗಿದರು. ಅವರ ಭಾಷಣ ಜಾನಪದ ಶೈಲಿಯಲ್ಲಿದ್ದರೂ ಅವರು ಬಳಸಿಕೊಂಡ ವಿಷಯ ಮಾರ್ಮಿಕವಾಗಿ ಪ್ರತಿಯೊಬ್ಬ ಕನ್ನಡಿಗನಿಗೂ ತನ್ನ ಕರ್ತವ್ಯದ ಎಚ್ಚರಿಕೆಯ ಕರೆಗಂಟೆಯಾಗಿತ್ತು. ಈ ನಾಡಿನಲ್ಲಿ ಕನ್ನಡ ಭಾಷೆಯ, ಕನ್ನಡ – ತಾಯಿಯ ಇರುವಿಕೆಯ ವಸ್ತುಸ್ಥಿತಿ, ಹೀಗೆ ಮುಂದುವರೆದರೆ ಮುಂದೆ ಕನ್ನಡ ನಾಡಲ್ಲಿ ಕನ್ನಡ ಭಾಷೆಯು ಇರಬಹುದಾದ ಸ್ಥಿತಿಯ ಬಗ್ಗೆ ಮನದ ಆತಂಕ, ದುಗುಡ ತುಂಬಿತ್ತು. ಅವರು ತಾಯಿಯ ಬಗ್ಗೆ ಮತ್ತು ಕನ್ನಡದವರನ್ನು ಅವರ ಕರ್ತವ್ಯ ಪ್ರಜ್ಞೆಯನ್ನು ಎಚ್ಚರಿಸುವಂತೆ ಹಾಡಿದ ಹಾಡುಗಳ ಜನಪದ ಸಾಹಿತ್ಯ ಸಭಿಕರ ಮನದಾಳ ಮುಟ್ಟುವಂತೆ ಅರ್ಥಗರ್ಭಿತವಾಗಿತ್ತು. ಆ ನಂತರ ಅವರು ಸಾಹಿತ್ಯ ಕ್ಷೇತ್ರದಲ್ಲಿ ತಾವು ಮಾಡಿದ ಕೃಷಿಯ ಬಗ್ಗೆ, ಅವರ ಲೇಖನಗಳ ಬಗ್ಗೆ ಅವರ ಸಾಧನೆಗಳ ಬಗ್ಗೆ ಕಿರುಪರಿಚಯ ನೀಡಿದರು.

ಶ್ರೀ ಸುಬ್ಬಾರೆಡ್ಡಿರವರು ಮಾತನಾಡುತ್ತಾ ರಾಜ್ಯ ಪ್ರಾಂತ್ಯವಾರು ವಿಂಗಡನೆಯ ಸಂದರ್ಭದ ಹೋರಾಟ, ಪರಿಶ್ರಮ ಮತ್ತು ಅವರ ವಿದ್ಯಾರ್ಥಿ ಜೀವನ, ಉಪನ್ಯಾಸಕ ಹುದ್ದೆ ಸೇವೆಯ ವೇಳೆಯಲ್ಲಿದ್ದಾಗಿನ ಅನುಭವಗಳನ್ನು ಹಂಚಿಕೊಂಡರು.

ಶ್ರೀ ಗುಪ್ತರವರು ನ್ಯಾಯಾಲಯಗಳಲ್ಲಿ ಕನ್ನಡ ಸಂಪೂರ್ಣ ಬಳಕೆ ಕಷ್ಟ , ಕನ್ನಡ ಪರ, ಸಾಹಿತ್ಯ ಕೂಟದ ಎಲ್ಲಾ ಕಾರ್ಯಕ್ರಮಗಳಿಗೆ ಸಹಕಾರ ಸಂಘದ ಸಂಪೂರ್ಣ ಸಹಕಾರ ಇದೆ ಎಂದರು. ರಾಜ್ಯೋತ್ಸವದ ಅಂಗವಾಗಿ ಸಾಹಿತ್ಯ ಕೂಟವು ಏರ್ಪಡಿಸಿದ್ದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಗೆದ್ದ ಬಹುಮಾನಿತರಿಗೆ ಅತಿಥಿಗಳಿಂದ ಬಹುಮಾನ ವಿತರಣೆ ಮಾಡಿಸಲಾಯಿತು. ವಿಜೇತರ ಪಟ್ಟಿಯನ್ನು ಶ್ರೀಮತಿ ಸತ್ಯಶ್ರೀರವರು ಪ್ರಕಟಿಸಿದರು.

ಸಭೆಯ ಅಧ್ಯಕ್ಷ ಭಾಷಣ ಮಾಡಿದ ಶ್ರೀ ಟಿ. ಎಂ. ವೆಂಕಟರೆಡ್ಡಿರವರು ಸಾಹಿತ್ಯ ಕೂಟದ ದಿನನಿತ್ಯದ ಚಟುವಟಿಕೆ, ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳು ಹಾಗೂ ಮುಂದಿನ ಉದ್ದೇಶಿತ ಯೋಜನೆಗಳನ್ನು ಸವಿಸ್ತಾರವಾಗಿ ವಿವರಿಸುತ್ತಾ ಈ ಸಮಾರಂಭದ ಯಶಸ್ಸಿಗೆ ಕಾರಣೀಭೂತರಾದ ಎಲ್ಲಾ ಸಂಘ ಸಂಸ್ಥೆಗಳು, ಪದಾಧಿಕಾರಿಗಳು ಹಾಗೂ ಇನ್ನಿತರ ನೇರ ಹಾಗೂ ಪರೋಕ್ಷ ಸಕಲ ರೀತಿಯಲ್ಲಿ ಸಹಕರಿಸಿದ ಸರ್ವರಿಗೂ ಯಶಸ್ಸನ್ನು ಕೋರಿ ಈಗ ನಮ್ಮ ವಾಚನಾಲಯ ಸ್ಥಳ ಕಿರಿದಾಗಿದೆ ಮುಂದೆ ನೂತನ ಕಟ್ಟಡದಲ್ಲಿ ವಿಶಾಲ ಕೊಠಡಿ ಲಭ್ಯವಾಗಲಿದೆ ಎಂದು ತಿಳಿಸಿದರು.

ಸಂಘದ ಖಜಾಂಚಿಗಳಾದ ಶ್ರೀ ವಿ. ಎನ್. ಹೆಗ್ಗಡೆರವರು ತಮ್ಮ ವಂದನಾರ್ಪಣಾ ಭಾಷಣದಲ್ಲಿ ಈ ಸಮಾರಂಭ ವ್ಯವಸ್ಥೆ ಗೊಳಿಸಲು ಶ್ರಮಿಸಿದ ಮಿತ್ರರು ಹಾಗೂ ಈ ಕಾರ್ಯಕ್ರಮ ಯಶಸ್ವಿಯಾಗಲು ಸಭೆಗೆ ಆಗಮಿಸಿದ ಅತಿಥಿಗಳಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತಾ ಸ್ಥಳದ ಅನುಮತಿ ನೀಡಿದ ಸಿವಿಲ್ ಮುಖ್ಯ ನ್ಯಾಯಾಧೀಶರಿಗೂ ನೇರ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನರ್ಪಸಿದರು.

ಇಡೀ ಕಾರ್ಯಕ್ರಮದ ರೂಪರೇಷೆಗಳೊಂದಿಗೆ, ಇದರ ನಿರೂಪಣಾ ಜವಾಬ್ದಾರಿಯನ್ನು ಹೊತ್ತು ಅಚ್ಚುಕಟ್ಟಾಗಿ ನಿರ್ವಹಿಸಿದವರು ಸಾಹಿತ್ಯ ಕೂಟದ ಕಾರ್ಯದರ್ಶಿಗಳಾದ ಶ್ರೀ ಎನ್. ಸಿ. ನಾರಾಯಣ್‌ರವರು.

ಕಾರ್ಯಕ್ರಮದ ನಂತರ ಮನರಂಜನಾ ಕಾರ್ಯಕ್ರಮವಾಗಿ ವಕೀಲ ಮಿತ್ರರಿಂದ ಸುಗಮ ಸಂಗೀತ ಕಾರ್ಯಕ್ರಮ ವ್ಯವಸ್ಥೆಗೊಳಿಸಲಾಗಿತ್ತು.

**ವರದಿ : ಎಸ್. ಗೋಪಾಲ್**, ವಕೀಲರು

# ೨೦೦೨–ನ್ಯಾಯಾಂಗದ ದೃಷ್ಟಿಯಲ್ಲಿ

ಈ ವರ್ಷವು ವಕೀಲರ ಪಾಲಿಗೆ ಅಷ್ಟೊಂದು ಹಿತಕಾರಿಯಾಗಿದ್ದಂತೆ ತೋರಲಿಲ್ಲ. ಹಲವಾರು ಆತಂಕಗಳು. ನೆಮ್ಮದಿಯಿಂದ ಕೆಲಸ ಮಾಡುತ್ತಾ ಹೋಗಲು ಮುಜುಗರದ ವಾತಾವರಣ. ನ್ಯಾಯಾಂಗದ ಬಗ್ಗೆ ಸಾರ್ವಜನಿಕರಲ್ಲಿ ಇಂಗು ತ್ತಿರುವ ಭರವಸೆ. ಒಂದು ತೆರನ ಪ್ರಕ್ಷುಬ್ಧತೆ ವರ್ಷದುದ್ದಕ್ಕೂ ತಾಂಡವವಾಡಿದ್ದಂತೂ ಕರ್ನಾಟಕದ ಪಾಲಿಗೆ ನಿಜ. ಪ್ರಾಯಶಃ ಯಾವ ವರ್ಷದಲ್ಲೂ ಈ ಬೆಂಗಳೂರಿನ ವಕೀಲ ಸಮುದಾಯ ಇಷ್ಟೊಂದು ಅಡ್ಡಿ ಆತಂಕಗಳನ್ನು ಎದುರಿಸಿದ್ದಿಲ್ಲವೇನೋ ? ಎರಡು ಮಹತ್ವದ ಘಟನೆಗಳೆಂದರೆ ಸಿವಿಲ್ ಪ್ರಕ್ರಿಯಾ ಸಂಹಿತೆ ಹಾಗೂ ಬಾಡಿಗೆ ನಿಯಂತ್ರಣ ಕಾಯಿದೆಗಳಿಗೆ ಬಂದ ತಿದ್ದುಪಡಿಗಳ ಪರಿಣಾಮಗಳು. ಎರಡೂ ತಿದ್ದುಪಡಿಗಳನ್ನು ಸರಿಯಾಗಿ ಅರಗಿಸಿಕೊಳ್ಳಲು ಬೇಕಾದ ಮಾನಸಿಕ ಸಿದ್ಧತೆ, ಅಭ್ಯಾಸ ಸಾಲದೆ ವಕೀಲರುಗಳು ನ್ಯಾಯಾಧೀಶರು, ಕಛೇರಿಯ ಸಿಬ್ಬಂದಿಗಳು ಹತ್ತು ಹಲವು ಗೊಂದಲಗಳಿಗೆ ಸಿಲುಕಿ ಒದ್ದಾಡುತ್ತಲೇ ಗೊಣಗಿಕೊಳ್ಳುತ್ತ ಹೊಂದಿಕೊಳ್ಳು ತ್ತಿರುವುದು ಒಂದು ತಮಾಷೆಯಂತೆ ಮೇಲು ನೋಟಕ್ಕೆ ಕಾಣುತ್ತಿದೆ ಯಾದರೂ ಈ ತಿದ್ದುಪಡಿಗಳ ದಾಳಿಗೆ ಬಲಿಯಾದ ಕಕ್ಷಿದಾರರ ಗೋಳುಗಳನ್ನು ಯಾರೂ ಗಮನಿಸಿದಂತಿಲ್ಲ. ಮೂಲದಾವೆಗಳನ್ನು ದಾಖಲಿಸುವಾಗ ಹಲವಾರು ನೀತಿ ನಿಯಮಗಳು ಬಂದಿದ್ದು ಕಕ್ಷಿದಾರರಿಗೆ ಅದೊಂದು ಹೊಸ ಹೊರೆಯೆಂದೇ ಪರಿಗಣಿಸಬೇಕಾಗಿದೆ. ಎಲ್ಲಾ ದಾಖಲೆಗಳನ್ನು ಮೂಲ ರೂಪದಲ್ಲಿ ದಾವೆಯ ಆರಂಭ ಹಂತದಲ್ಲಿಯೇ ದಾಖಲಿಸಬೇಕಾದ ನಿಯಮವನ್ನು ಪಾಲಿಸಲ್ಪಡುವುದು ಒಂದು ತೊಡಕೇ ಇರಬಹುದು – ಏಕೆಂದರೆ ಎಷ್ಟೋ ಮೂಲ ದಾಖಲೆಗಳು ಮನುಷ್ಯನಿಗೆ ಬದುಕಿ ನುದ್ದಕ್ಕೂ ತಪಾಸಣೆ, ಮತ್ತೊಂದು ಎಂಬ ಕಾರಣಗಳಿಗಾಗಿ ತಮ್ಮಲ್ಲಿಯೇ ಇರಬೇಕಾಗಿದ್ದು ೪–೮ ವರ್ಷಗಳ ಕಾಲ (ಎಷ್ಟೋ ಬಾರಿ ಹಲವಾರು ದಶಕಗಳು) ನ್ಯಾಯಾಲಯದಲ್ಲಿಯೇ ಇರಿಸ ಬೇಕೆಂಬುದು ಒಂದು ಅಹಿತ ನಿಯಮವೇ ಸರಿ. ಆದರೆ ಕಾನೂನು ತಿದ್ದುಪಡಿಯಾಗಿ ಜಾರಿಗೊಂಡ ಮೇಲೆ ಎಷ್ಟೇ ಕಹಿಯಾದರೂ ಪಾಲಿಸಲೇ ಬೇಕಾದ್ದು ಅನಿವಾರ್ಯ.

ತಿದ್ದುಪಡಿಯ ವಿರುದ್ಧ ನಡೆದ ವಕೀಲರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಪರಿಷ್ಕರಿಸಿದ ತಿದ್ದುಪಡಿ ಹೆಚ್ಚು ವಾಸಿ ಎನಿಸಿಕೊಂಡಿದೆ. ಬಾಡಿಗೆ ನಿಯಂತ್ರಣ ಕಾಯಿದೆಯಲ್ಲಿಯೂ ಹಲವಾರು ಗೊಂದಲಗಳೇರ್ಪಟ್ಟಿವೆ. ಉದಾಹರಣೆಗೆ, ಒಂದು ಪುರ ಪಂಚಾಯತಿಯ ಹೆಸರು ಕಾಯಿದೆಯ ಶೆಡ್ಯೂಲ್‌ನಲ್ಲಿ ನಮೂದಿತವಾಗದೇ ಹೋಗಿರುವುದು ನೆಲಮಂಗಲದ ನ್ಯಾಯಾಲಯದಲ್ಲಿ ಬಾಡಿಗೆ ನಿಯಂತ್ರಣ ಕಾಯಿದೆಯಡಿಯ ಹೆಚ್‌ಆರ್‌ಸಿ ದಾವೆಗಳನ್ನೇ ದಾಖಲಿಸದಂತಾಗಿದೆ. ನಿಜ ಆಡಳಿತ ದಲ್ಲಿ ಎಲ್ಲವೂ ಸುಸೂತ್ರವಿರುವುದಿಲ್ಲ. ಆದರೆ ಆಡಳಿತಾತ್ಮಕ ತಪ್ಪುಗಳಿಂದಾಗಿ ಹೊಡೆತ ತಿನ್ನುತ್ತಲೇ ಶೋಷಣೆಗೆ ಒಳಗಾಗುತ್ತಿರುವವರು ಕಕ್ಷಿದಾರರು. ವಕೀಲರ ಮೇಲಿನ ಭರವಸೆಯಿಟ್ಟು ಬರುವ ಕಕ್ಷಿದಾರನಿಗೆ ವಕೀಲನೇ ಗೊಂದಲದಲ್ಲಿರುವ ಅಂಶವು ಆತ ನ್ಯಾಯಾಲಯಕ್ಕೆ ಬರಲು ಏನು ಉತ್ತೇಜನ ನೀಡಬಹುದು ? ಸ್ಪಷ್ಟ , ನೇರ, ಸರಳ ಪದಗಳಿಗೆ ನ್ಯಾಯಾಂಗದಲ್ಲಿ ಅರ್ಥವೇ ಇಲ್ಲದಂತಾಗಿ ಹೋಗಿರುವುದು ಸಾರ್ವಜನಿಕರಲ್ಲಿನ ನ್ಯಾಯಾಲಯಗಳ ಬಗ್ಗೆಯ ಉಪೇಕ್ಷೆಗೆ ಕಾರಣವಾಗಿದೆ.

ಹಲವಾರು ಕಾರಣಗಳಿಗಾಗಿ ತಮಗೆ ನೇರವಾಗಿ ಸೇರದ್ದಕ್ಕೂ ಕೂಡ ನಮ್ಮ ವಕೀಲರು ನ್ಯಾಯಾಲಯಗಳ ಬಹಿಷ್ಕಾರಕ್ಕೆ ತೊಡಗಬೇಕಾಯಿತು. ಸರ್ವೋಚ್ಚ ನ್ಯಾಯಾಲಯದಿಂದ ಛೀಮಾರಿಗೂ ಒಳಗಾಗಬೇಕಾಯಿತು. ಈ ಮಧ್ಯೆ ನ್ಯಾಯಾದೀಶರುಗಳಲ್ಲೂ ಎಲ್ಲವೂ ಸರಿಯಾಗಿಲ್ಲ ಎನ್ನುವ ಹಾಗೆ ಬೆಳವಣಿಗೆಗಳು ನಡೆದು ಇಡೀ ನ್ಯಾಯ ಸಮುದಾಯವೇ ದಿಕ್ಕೆಟ್ಟು ಕೂರುವಂತಾಗಿ ಹೋಗಿದೆ. ನ್ಯಾಯಾಂಗವು ಸಾರ್ವಜನಿಕ ದೃಷ್ಟಿಯಲ್ಲಿ ಅವಹೇಳನಕ್ಕೆ ಗುರಿಯಾಗಲು ತೀವ್ರವಾಗಿ ಕಾರಣವಾಗುವ ಬೆಳವಣಿಗೆಗಳನ್ನು ನೋಡಿ ನ್ಯಾಯದೇವತೆಯ ತಕ್ಕಡಿ ತಿರುಗುಮೇಲಾಗಿದ್ದರೆ ಆಶ್ಚರ್ಯವೇನು ?

ಕಾವೇರಿ ನೀರಿನ ವಿವಾದವು ರಾಜ್ಯದ ಜ್ವಲಂತ ಸಮಸ್ಯೆ. ಅಂತಹ ಸಮಸ್ಯೆಯನ್ನು ನಮ್ಮ ಕರ್ನಾಟಕ ಸರ್ಕಾರದ ವಕೀಲರುಗಳು ಸೂಕ್ತ ರೀತಿಯಲ್ಲಿ ನ್ಯಾಯಾಲಯದಲ್ಲಿ ಪ್ರತಿಪಾದಿಸಲಿಲ್ಲವೆಂಬ ಟೀಕೆಯೂ ಅಹಿತಕರವಾಗಿತ್ತು. ನಾಗಪ್ಪರ ಹತ್ಯೆ ಪ್ರಕರಣ ಕೂಡ ನ್ಯಾಯಲಯಗಳ ಸುತ್ತ ಗಿರಕಿ ಹೊಡೆಯಿತು. ಏನು ಒಳ್ಳೆಯದು ಜರುಗುವುದಕ್ಕೂ ಸೂಕ್ತವಾತಾವರಣವು ಇರದೇ ಹೋದದ್ದು ಒಂದು ದುರಂತ. ಇನ್ನು ತೀರಾ ವ್ಯಯುಕ್ತಿಕಕ್ಕೆ ಬರುವುದಾದರೆ ಇತ್ತೀಚೆಗೆ ನಮ್ಮ ಬೆಂಗಳೂರು ವಕೀಲರುಗಳಿಗೆ ಸಿವಿಲ್ ನ್ಯಾಯಾಲಯದ ಆವರಣ ಹೊಕ್ಕುವುದೇ ಒಂದು ದೊಡ್ಡ ಹಿಂಸೆಯಾಗಿದೆ. ಎಲ್ಲಿ ನೋಡಿದರಲ್ಲಿ ವಾಹನಗಳು. ವಾಹನಗಳನ್ನು ನಿಲ್ಲಿಸಲು ಸ್ಥಳವಿಲ್ಲ. ಹೋಗಿ ಬರಲು ಸಾಧ್ಯವಿಲ್ಲ. ಸಂಘದಲ್ಲಿ ವಕೀಲರು ಬಿಡುವಿನ ವೇಳೆಯಲ್ಲಿ ವಿರಮಿಸಲು ಸ್ಥಳವಿಲ್ಲ. ಯಾವುದೇ ಕೆಲಸ ಮಾಡಲು ಅಸಾಧ್ಯ. ವಕೀಲರ ಸಂಘವೇನೋ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತಾದರೂ ವಕೀಲರ ದಿನನಿತ್ಯದ ಸಮಸ್ಯೆಗಳಾದ ಸ್ಥಳಾವಕಾಶದ ಅಭಾವ, ಕ್ಯಾಂಟೀನ್, ಪಾರ್ಕಿಂಗ್, ವಿರಾಮಸ್ಥಳ, ಲಿಫ್ಟ್‌ನ ಸೂಕ್ತ ಕಾರ್ಯಾಚರಣೆ, ಶೌಚಾಲಯ ವ್ಯವಸ್ಥೆ ಈ ಬಗ್ಗೆ ದಿವ್ಯ ನಿರ್ಲಕ್ಷ್ಯದಿಂದಿರುವುದು ತುಂಬಾ ಶೋಚನೀಯ. ಮಾನವೀಯ ವಾತಾವರಣವೇ ಕಣ್ಮರೆಯಾಗಿರುವುದು ಬೆಂಗಳೂರಿನ ವಕೀಲರ ಸಂಘದ ಒಂದು ದುರಂತ. ಯಾರಿಗೆ ಯಾರೂ ಬೇಡವೆನ್ನುವಂತಹ ವಾತಾವರಣದಲ್ಲಿ ಏನು ಹಿತ ಕಾಣಬಹುದಾಗಿದೆ ?

''ಆಡಿದ್ದೇ ಆಟ, ನಡೆದದ್ದೇ ದಾರಿ'' ಎನ್ನುವ ಹಾಗಿದೆ ಬೆಂಗಳೂರು ವಕೀಲರ ಬದುಕು. ಯಾರಲ್ಲಿ ಯಾರಿಗೂ ವಿಶ್ವಾಸವಿಲ್ಲ, ನಂಬಿಕೆಯಲ್ಲ. ಇಂತಲ್ಲಿ ಉತ್ತಮ ಫಲಿತಾಂಶಗಳೆಲ್ಲಿ ಬಂದಾವು. ನ್ಯಾಯಮೂರ್ತಿಗಳು ಕೂಡ ಆಡಳಿತ ಸಮಸ್ಯೆಗಳಿಗೆ ಗಮನ ಕೊಡದೆ ತಮ್ಮ ಜವಾಬ್ದಾರಿಯನ್ನು ಕೋರ್ಟು ಮಟ್ಟಿಗೆ ಸೀಮಿತಗೊಳಿಸಿಕೊಳ್ಳುತ್ತಿರು ವುದು ಹಲವಾರು ತೊಡಕುಗಳಿಗೆ ಕಾರಣವಾಗಿದೆ. ಸರ್ಕಾರಿ ಕೆಲಸಕ್ಕಿಂತ ಇತರೇ ಕೆಲಸಗಳಲ್ಲೇ ಹೆಚ್ಚು ಮಗ್ನವಾಗಿರುವ ನ್ಯಾಯಾಲಯ ನೌಕರರು ಕಕ್ಷಿದಾರರ ಬಾಧೆಗಳಿಗೆ ತಮ್ಮ ನಿರ್ಲಕ್ಷದಿಂದ ಹೆಚ್ಚು ಹೆಚ್ಚು ಕಾರಣರಾಗುತ್ತಿದ್ದಾರೆ. ಹಣ ನೀರಿನಂತೆ ಚೆಲ್ಲಿದಲ್ಲಿ ಮಾತ್ರವೇ ಎಲ್ಲ ಎನ್ನುವುದು ನಮ್ಮ ನ್ಯಾಯಾಲಯದ ಸುತ್ತ ಸುತುತ್ತಿರುವ ಸತ್ಯ. ೨೦೦೩ ಒಂದು ಉತ್ತಮ ಹಾಗೂ ಆಶಾದಾಯಕ ವರ್ಷವಾಗಬಹುದೇನೋ ಎಂದು ಆಶಿಸುವುದಷ್ಟೇ ಈ ದಿನಗಳಲ್ಲಿ ಸಾಧ್ಯ. Let us hope for the Best - Goods Bye to 2002.

**ಜಿ. ಎಸ್. ನಟರಾಜನ್**

---

೧ನೇ ಪುಟದಿಂದ

## ಎಲ್ಲರ ಲಕ್ಷ್ಯ ಸೆಳೆದ 'ಸಾರ್ಥಕ ಸಂಜೆ'

ಉಳಿದ ರೋಗಿಗಳಿಗೆ ಸಮರ್ಪಕ ಸೇವೆ ಮಾಡಲು ಅನುಕೂಲವಾಗುತ್ತದೆ ಎಂದು ನುಡಿದರು. ಈ ಬಗ್ಗೆ ಸಾರ್ವಜನಿಕರಿಗೆ ಸೂಕ್ತ ಶಿಕ್ಷಣ ನೀಡಲು ಸಂಸ್ಥೆ ವ್ಯಾಪಕವಾದ ಯೋಜನೆಗಳನ್ನು ಹಾಕಿಕೊಂಡಿದೆ. ಸಾರ್ವಜನಿಕರು, ಕೇಂದ್ರ, ರಾಜ್ಯ ಸರ್ಕಾರಗಳು ನಮ್ಮ ಕೈ ಬಲಪಡಿಸಬೇಕೆಂದು ಒತ್ತಿ ಹೇಳಿದರು. ಅಂದಿನ ಸಮಾರಂಭದಲ್ಲಿ ಮಾನ್ಯ ನ್ಯಾಯಾಧೀಶರುಗಳಾದ ಸರ್ವಶ್ರೀ ವಿ. ಆರ್. ಸಿದ್ದಿಕಿ, ಕೆ. ಎನ್. ಕೇಶವನಾರಾಯಣ, ಪಿ. ವಿ. ಹೂಗಾಡೆ, ರಿಜಿಸ್ಟ್ರಾರ್ ಜನರಲ್ ಎ. ಸಿ. ಕಬ್ಬಿನ್, ರಿಜಿಸ್ಟ್ರಾರ್ ವಿಜಿಲೆನ್ಸ್ ಎ. ಎಸ್. ಪಚಾಪುರ ಮೊದಲಾದ ಗಣ್ಯರಲ್ಲದೆ, ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ನ್ಯಾಯಾಂಗ ನೌಕರರ ಸಂಘದ ಪದಾಧಿಕಾರಿಗಳು ಉಪಸ್ಥಿತ ರಿದ್ದರು. ಸಂಘದ ಅಧ್ಯಕ್ಷರಾದ ಜಿ. ಎಸ್. ಪ್ರಭಾಕರ ಪ್ರಸಾದ್ ಸ್ವಾಗತ ಕೋರಿ ಕೊಡುಗೆಯ ಹಿಂದಿನ ಉದ್ದೇಶಗಳನ್ನು ವಿವರಿಸಿದರು. ಉಪಾಧ್ಯಕ್ಷ ಎಸ್. ಎನ್. ಶಿವಶಂಕರ್ ಅವರು ಅಚ್ಚು ಕಟ್ಟಾಗಿ ಸಮಾರಂಭವನ್ನು ನಿರೂಪಿಸಿದರು. ಒಟ್ಟಾರೆ ಬಹುಕಾಲ ನೆನಪಿನಲ್ಲಿ ಉಳಿಯುವ ಈ ಸಮಾರಂಭ ಮತ್ತು ಉದ್ದೇಶಗಳು ಅನುಕರಣೀಯ.

**– ಸೂತ್ರಧಾರ ರಾಮಯ್ಯ**

---

### ಅಗಾಟ ಭಗಾಟ ಲಗಾಟ

ಅಗಲವಾಗಿ ಕಣ್ಣ ಬಿಟ್ಟು
ಅತ್ತ ಇತ್ತ ಸುತ್ತ ನೋಡಿ
ಉಂಡದ್ದೆಲ್ಲ ಊಟವೆಂದು
ಕಂಡದ್ದೆಲ್ಲ ನೋಟವೆಂದು
ಹಿಂದು ಮುಂದು ಅರಿಯದೆಯೆ
ಆಡಿಬಿಟ್ಟೆ ಅಗಾಟವ

ಭರದಿ ಬಂತು ಹರಯ ಕಾಲ
ಧರೆಯನೆಲ್ಲ ಜಯಿಪೆನೆಂದು
ತುಳಿದ ನೆಲವು ನನ್ನದೆನುತ
ಹೊಳೆದ ಚಿನ್ನ ನನಗೇ ಎನುತ
ಬಳೆಯ ದನಿಗೆ ಹೆಜ್ಜೆ ಹಾಕಿ
ಕಳೆದೆನೆಲ್ಲ ಭಗಾಟವ

ಅರಿಯದೆಲ್ಲ ಅಗಾಟವಾಯ್ತು
ಬರಿದೆ ಮೋಹ ಭಗಾಟವಾಯ್ತು
ಜರೆಯು ಯಮನ ತಂಗಿ ಅಪ್ಪಿ
ಸರಿಯದಂತೆ ಹಿಡಿಯುತಿಹಳು
ಗುರುತು ಮರೆತು ಕಾಯುತಿರುವೆ
ಎರಗಿ ಬರುವ ಲಗಾಟವ !!

**ಪಿ. ವ್ಹಿ ಕಿತ್ತೂರ**

---

### ಯೌವ್ವನ ನೀ ಬಂದಾಕ್ಷಣ

ಯೌವ್ವನ ನೀ ಬಂದಾಕ್ಷಣ !
ಕಡಿವಾಣವಿರದ ಕುದುರೆ
ಯಂತಾಗುವುದೀ ಮನ ॥

ಕಂಡಕಂಡದ್ದನ್ನೆಲ್ಲಾ ತನ್ನದಾಗಿಸುವ
ಬಯಕೆಯಾ ಬೆನ್ನೇರಿ
ಬೀದಿ ಬೀದಿ ಅಲೆದು
ಕೈಗೆಟುಕದ್ದನ್ನು ಹಿಡಿಯಲೆಳೆಸಿ
ಸಿಕ್ಕರೂ ಮೇಲೇರಲಾರದೇ
ವಿರಹದ ಮೊರೆ ಹೋಗುವುದೀ ಮನ
ಯೌವ್ವನ ನೀ ಬಂದಾಕ್ಷಣ !

**ಕೆ.ಟಿ. ಶ್ರದ್ಧಾನಂದ, ವಕೀಲರು**

---

## ಪಡಿತರ ವ್ಯವಸ್ಥೆ ಒಂದು ಕಾರ್ಯಕ್ರಮ

ಕಳೆದ ಸಂಚಿಕೆಯಿಂದ

ವಿವರಿಸುತ್ತಾ ಇದರಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾ ಇಲಾಖೆಯಲ್ಲಿನ ಲೋಪ ದೋಷಗಳನ್ನು ತಿದ್ದಿ, ವಿತರಣೆಯಲ್ಲಿ ಸರಳೀಕರಣಗೊಳಿಸಬೇಕೆಂದರು.

ಮಾನ್ಯ ಸಚಿವರು ಮಾತನಾಡುತ್ತಾ ಇಲಾಖೆಯಲ್ಲಿನ ಸಮಸ್ಯೆಗಳು ಕಾರ್ಡು ಮತ್ತು ಇತರೆ ವಿತರಣಾ ವ್ಯವಸ್ಥೆಯ ಆಧುನೀಕರಣದ ಬಗ್ಗೆ ಹೇಳುತ್ತಾ ಈ ವಿಚಾರದಲ್ಲಿ ಈಗ ಬಹಳಷ್ಟು ಸರಳೀಕರಣಗೊಳಿಸಲಾಗಿದೆ. ಪಡಿತರ ಕಾರ್ಡುಗಳನ್ನು ಎರಡು ವರ್ಗಗಳನ್ನಾಗಿ ಮಾಡಲಾಗಿದೆ. ಬಡತನರೇಖೆಗಿಂತ ಕೆಳಮಟ್ಟದ ವರ್ಗ ಮತ್ತು ಮೇಲ್ಮಟ್ಟದ ವರ್ಗವೆಂದು ವಿಂಗಡಿಸಿ ಆಯಾ ವರ್ಗದವರಿಗೆ ಅನುಗುಣವಾಗಿ ಪಡಿತರ ಚೀಟಿಗಳನ್ನು ಬೇರೆ ಬೇರೆಯಾಗಿ ವಿತರಿಸಲಾಗುವುದು. ಪಡಿತರ ಚೀಟಿ ಯಾರಿಗೇ ಆಗಲಿ ಅವಶ್ಯಕತೆ ಇದ್ದಲ್ಲಿ ನಮ್ಮನ್ನಾಗಲೀ ನಮ್ಮ ಇಲಾಖಾ ಅಧಿಕಾರಿಗಳನ್ನಾಗಲೀ ಸಂಪರ್ಕಿಸಿದರೆ ತಕ್ಷಣವೇ ವ್ಯವಸ್ಥೆಗೊಳಿಸಲಾಗುವುದು. ವಕೀಲರಿಗೆ ನೀಡುವಲ್ಲಿ ಈ ಹಿಂದೆ ಆಗಿರುವ ಲೋಪ ಸರಿಪಡಿಸಿಕೊಂಡು ಮುಂದೊಂದು ನಿಗದಿತ ದಿನ ನಮ್ಮ ಇಲಾಖಾ ಅಧಿಕಾರಿಗಳೊಂದಿಗೆ ಇದೇ ಸಭಾಂಗಣಕ್ಕೆ ಆಗಮಿಸಿ ಆಸಕ್ತ ವಕೀಲರಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗುವುದೆಂದು ತಿಳಿಸಿದರು.

ಇಲಾಖಾಧಿಕಾರಿ ಶ್ರೀ ಬಸವರಾಜ್ ಮಾತನಾಡಿ ವಿತರಣಾ ಲೋಪದೋಷ ಸರಿಪಡಿಸಿ, ಸಾರ್ವಜನಿಕ ಸೇವೆಯಲ್ಲಿ ಇಲಾಖೆ ಹೆಚ್ಚು ನಿರತವಾಗುತ್ತದೆಂದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ಮರಿಯಪ್ಪನವರು ವಂದನಾರ್ಪಣೆ ಮಾಡುವುದರೊಂದಿಗೆ ಸಭೆ ಮುಕ್ತಾಯಗೊಂಡಿತು.

## ಉಗ್ರಗಾಮಿಗಳ ಹಾವಳಿ

ಭಾರತೀಯ ಮುಸಲ್ಮಾನರು ಸರಿಸಮಾನರು. ಕೆಲವು ವೇಳೆ ಸರಿಸಮಾನತೆಗಿಂತ ಹೆಚ್ಚು ಹಕ್ಕುಗಳನ್ನೂ, ಸೌಲಭ್ಯಗಳನ್ನೂ ಪಡೆದಿದ್ದಾರೆ. ಪ್ರಪಂಚದ ಯಾವ ದೇಶ ದಲ್ಲಿಯೂ ಅಲ್ಪಸಂಖ್ಯಾತರಿಗೆ ಇಂತಹ ಸೌಲಭ್ಯಗಳು ಕಂಡು ಬರುವುದಿಲ್ಲ.

ಆದ್ದರಿಂದ ತಮ್ಮ ಹಕ್ಕುಗಳನ್ನು ಚಾಚೂ ತಪ್ಪದೇ ಪರಿಪಾಲಿಸಿಕೊಂಡು ಅದರ ಜೊತೆಯಲ್ಲಿಯೇ ಭಾರತ ಸಮಾಜ ಮತ್ತು ಬಂಧು ಗಳಾದ ಹಿಂದುಗಳೊಡನೆ ಹೊಂದಾಣಿಕೆಯಿಂದ, ಸದ್ಭಾವನೆಯಿಂದ ಜೀವನ ನಡೆಸಲು ಸಿದ್ಧರಾಗಿರಬೇಕು. ಉಗ್ರಗಾಮಿಗಳನ್ನು , ಭಯೋತ್ಪಾದಕರನ್ನು ಹಿಡಿದು ಅಥವಾ ಅವರ ಮಾಹಿತಿಗಳನ್ನು ಪಡೆದು ಸರ್ಕಾರಕ್ಕೆ ಒಪ್ಪಿಸಬೇಕು.

**'ಆಧಾರ'**

ಪ್ರಕಾಶಕರು : ಲಹರಿ ವಕೀಲರ ವೇದಿಕೆ, ಸಂ. ೨೯೮೦ ''ಲಕ್ಷ್ಮೀದೀಪ್'', ೧೭ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು–೫೬೦೦೭೦. ಮುದ್ರಕರು : ಪರಿಮಳ ಮುದ್ರಣಾಲಯ ಮೌಂಟ್‌ಜಾಯ್ ಬಡಾವಣೆ, ಹನುಮಂತನಗರ, ಬೆಂಗಳೂರು–೫೬೦೦೧೯, ದೂರವಾಣಿ : ೬೫೨೫೫೧೬. ಸಂಪಾದಕರು : ಜಿ. ಎಸ್. ನಟರಾಜನ್, ಸಹ ಸಂಪಾದಕರು : ವಿ. ಎನ್. ಮೂರ್ತಿ